

## 12 ವರ್ಷದ ಹುಡುಗ ಬೈಕ್ ಹೊಡೆದಾಗ!

ಗಂಡು ಮಕ್ಕಳನ್ನು ಬೆಳೆಸುವಾಗ ಬರುವ ಸಾಮಾನ್ಯ ಸಮಸ್ಯೆಯೆಂದರೆ ಅವರು ಇನ್ನೂ 18 ತಲುಪುವ ಮೊದಲೇ ಬೈಕ್ ಹೊಡೆಯುವ ಬೇಡಿಕೆ ಮುಂದಿಡುವುದು! ಅಪ್ಪ- ಅಮ್ಮಂದಿರ ಶಿಸ್ತು ಕೆಲಸ ಮಾಡದಿರುವುದು ಒಂದೆಡೆಯಾದರೆ, ಬಹಳಷ್ಟು ಸಲ ಅಪ್ಪ- ಅಮ್ಮಂದಿರೂ ಇದನ್ನು ಒಂದು 'ಸಾಧನೆ' ಎಂದೇ ಭಾವಿಸಿಬಿಡುತ್ತಾರೆ!

ಹದಿಹರೆಯದ ಮಕ್ಕಳಲ್ಲಿ ಸಾವಿನ ಒಂದು ಪ್ರಮುಖ ಕಾರಣ ರಸ್ತೆ ಅಪಘಾತಗಳು ಎಂಬುದು ಬಹಳಷ್ಟು ಜನರಿಗೆ ಗೊತ್ತಿರದ ಸಂಗತಿ. ವೇಗದ ಅಂದಾಜು, ಪರಿಣಾಮ, ನಿರ್ಧಾರಗಳನ್ನು ಕೈಗೊಳ್ಳುವ ಮಿದುಳಿನ 'ಪ್ರಿಫ್ರಾಂಟಲ್ ಕಾರ್ಟೆಕ್ಸ್' ಪೂರ್ಣವಾಗಿ ಪ್ರಬುದ್ಧವಾಗುವುದು 18ರ ವಯಸ್ಸಿನ ನಂತರವೇ. ಹಾಗಾಗಿ 'ಹುಡುಗ'ರು 18ಕ್ಕೆ ಮುನ್ನ ಬೈಕು ಓಡಿಸುವುದು ಅವರಿಗೂ -ರಸ್ತೆಯ ಮೇಲಿನ ಇತರರಿಗೂ ಅಪಾಯವೇ!

ಹುಡುಗಿಯರು ತಮ್ಮ ಸಮಸ್ಯೆಗಳು ಮತ್ತು ವೈಫಲ್ಯಗಳನ್ನು ತುಂಬಾ ವೈಯಕ್ತಿಕವಾಗಿ ತೆಗೆದುಕೊಂಡು ತಮ್ಮನ್ನೇ ವಿಮರ್ಶೆ ಮಾಡಿಕೊಳ್ಳುವುದು ಹೆಚ್ಚು. ಆದರೆ ಹುಡುಗರ ದೃಷ್ಟಿ ಸಮಸ್ಯೆಯತ್ತ ಕೇಂದ್ರಿತ. ಅಲ್ಲಿ ವೈಫಲ್ಯವೂ ಅಷ್ಟೇ, ಅವರದ್ದಲ್ಲ! ಆ ಸಮಸ್ಯೆಯದ್ದು. ಹಾಗಾಗಿಯೇ ಹುಡುಗಿಯರು 'ಕುಳಿತು' ಓದಿ ಶಾಲೆಯಲ್ಲಿ ಹುಡುಗರಿಗಿಂತ ಮುಂದಿದ್ದರೂ, ಹುಡುಗರು ಪದವೀಧರರಾಗುವ ಸಾಧ್ಯತೆ ಹೆಚ್ಚು.

ಇವೆರಡೂ ಸಾಮರ್ಥ್ಯಗಳೂ ವಿರುದ್ಧವಾದುದಲ್ಲ ಎಂಬುದು ಗಮನಾರ್ಹ. ಹೆಣ್ಣು ಮಕ್ಕಳನ್ನು ದೈಹಿಕ ಆಟಗಳಲ್ಲಿ ತೊಡಗಿಸುವುದು, STEM (Science, Technology, Engineering, Mathematics) ನಂತಹ ವಿಷಯಗಳಲ್ಲಿ ಪ್ರಾಯೋಗಿಕವಾದ ಪ್ರತಿದಿನದ ಉದಾಹರಣೆಗಳಿರುವ ಆಟಗಳಲ್ಲಿ ಪ್ರೋತ್ಸಾಹಿಸುವುದು ಉಪಯುಕ್ತ. ಗಂಡು ಮಕ್ಕಳನ್ನು ಓದು, ಚಿತ್ರಕಲೆ, ಬರಹ, ಕಲ್ಪನೆಯ ಯುದ್ಧ-ಪುರಾಣದ ಕಥೆಗಳು ಇವುಗಳ ಅನುಭವ ಪಡೆಯುವಂತೆ ಉತ್ತೇಜಿಸಬೇಕು. ಅವರು ಆ್ಯಕ್ಷನ್ ಇಷ್ಟಪಡುವವರು, ಅಪಾಯದ ಸಾಹಸಗಳು ಅವರ ಸಹಜ ಪ್ರವೃತ್ತಿ ಎಂದು ಓದಿನಿಂದ ಅವರನ್ನು ದೂರವಿಡುವುದು ಸಲ್ಲದು. ಒಂದು ನಿರ್ದಿಷ್ಟ ಸಮಯದಲ್ಲಿ ಓದುವ ಶಿಸ್ತು, ಬಾಹ್ಯ ಆಕರ್ಷಣೆಗಳನ್ನು ನಿವಾರಿಸಿ (ಮೊಬೈಲ್, ಟಿ.ವಿ, ಕಂಪ್ಯೂಟರ್ ಇತ್ಯಾದಿ) ಓದುವುದು, ಆಯಾ ಪರೀಕ್ಷೆಗಳಿಗೆ ತಯಾರಾಗಿ ಹೋಗುವುದು ಇವು ಹೆಣ್ಣುಮಕ್ಕಳಿಗಷ್ಟೇ ಅಲ್ಲ, ಗಂಡು– ಹೆಣ್ಣು ಇಬ್ಬರಿಗೂ ಅನ್ವಯ. ಅದು 'ಸಾಧ್ಯ'ವೂ ಹೌದು.

ಅಪ್ಪಂದಿರು ಎಷ್ಟೋ ವರ್ಷಗಳ ಹಿಂದಿನ ತಮ್ಮ ಬಾಲ್ಯವನ್ನು ನೆನೆಸಿಕೊಂಡು, 'ಅಯ್ಯೋ ನಾನೂ ಓದ್ತಿರಲಿಲ್ಲ, ಪರ್ವಾಗಿಲ್ಲ ಬಿಡು' ಎಂದು ತಳ್ಳಿಹಾಕುವುದು ಪರಂಪರಾನುಗತವಾಗಿ ತಪ್ಪು ಕಲ್ಪನೆಗಳು ಮುಂದುವರೆಯುವಂತೆ ಮಾಡುತ್ತವೆ. ಅದರ ಬದಲು ಅಪ್ಪ- ಅಮ್ಮ ತಮ್ಮ 'ಅತಿ ಮೊಬೈಲ್ / ಅತಿ ಟಿವಿ ಸೀರಿಯಲ್' ಚಟವನ್ನು ಬಿಟ್ಟು ಮಕ್ಕಳು ಯಾರೇ ಆಗಲಿ, ಅವರ ಓದುವ ವಿಧಾನ, ಕಲಿಯುವ ರೀತಿ, ಪಾಠಗಳಲ್ಲಿ ಆಸಕ್ತಿ ವಹಿಸಬೇಕು.

### ನಡವಳಿಕೆಯ ಸಮಸ್ಯೆಗಳು ಹುಡುಗರಲ್ಲಿ ಹೆಚ್ಚೇ?

ಆಸ್ಟ್ರೇಲಿಯಾದಲ್ಲಿ ಒಂದು ಬಹುದೊಡ್ಡ ಅಧ್ಯಯನ ನಡೆಯಿತು. ಹುಟ್ಟಿನಿಂದ, 9 ವರ್ಷಗಳವರೆಗೆ ಸುಮಾರು 10,000 ಮಕ್ಕಳನ್ನು, ಅವರ ಬೆಳವಣಿಗೆಯನ್ನು ವಿವಿಧ ಅಂಶಗಳಲ್ಲಿ ಅಧ್ಯಯನ

ಸರ್ವಜನ ಸುಖಿನೋ ಭವಂತು:
ಶ್ರೀಕಾಳಿಕದುರ್ಗಾ ಅಂಜನಾ ವಶೀಕರಣ ತಂತ್ರಂ

ಪ್ರಧಾನ ತಾಂತ್ರಿಕ್ ಗುರೂಜಿ ಶ್ರೀರಾಘವೇಂದ್ರರಾವ್ INDIA'S MOST POPULAR TANTRIK
ಕೇರಳ ಕೊಳ್ಳೇಗಾಲ ಬಂಗಾಳಿ ತಮಿಳುನಾಡು, ಅಥರ್ವಣ ವೇದದ ಮಲಯಾಳಿ ಕುಟ್ಟಿಚಾತನ್ ರಣಮೋಡಿ, ರಕ್ತಮೋಡಿ, ಸ್ಮಶಾನಮೋಡಿ, ರಹಸ್ಯವಾದ ಅಘೋರಿ ನಾಗಸಾಧು ಅದ್ಭುತ ಚಮತ್ಕಾರ ಶಕ್ತಿಗಳ ಇಂದಿನ ಕಾಲದಲ್ಲೂ ಜೀವಂತವಾಗಿರುವ 600 ವರ್ಷದ ಸ್ಮಶಾನ ಮಾಂತ್ರಿಕ ಪದ್ಧತಿಗಳಿಂದ ನಿಮ್ಮ ಸಮಸ್ಯೆಗಳಾದ ಸ್ತ್ರೀಪುರುಷ ವಶೀಕರಣ, ಪ್ರೇಮವಿಚಾರ, ಮದುವೆ, ದಾಂಪತ್ಯ, ಸಂತಾನ, ಜನವಶಂ, ಲಕ್ಷ್ಮೀವಶಂ, ಭೂಮಿವಶ, ಶತ್ರುನಾಶಂ, ಮಾಟಂ-ಮಂತ್ರಂ, ಭೂತಬಾಧೆ, ಆರೋಗ್ಯ, ದೈಹಿಕ, ಮಾನಸಿಕ, ಪ್ರೀತಿಯಲ್ಲಿ ನಂಬಿಮೋಸ, ಇಷ್ಟಪಟ್ಟವರು ನಿಮ್ಮಂತೆಯಾಗಲು ಇನ್ನೂ ನಿಮ್ಮ ಕಠಿಣ ನಿಗೂಢ ಗುಪ್ತಸಮಸ್ಯೆಗಳಿಗೆ ಕೇರಳದ ಭದ್ರಕಾಳಿ ಬಲಿಷ್ಠ ಪೂಜಾಶಕ್ತಿಯಿಂದ
ಕೇವಲ 5 ದಿನದಲ್ಲಿ ಶಾಸ್ತ್ರೋಕ್ತ ಪದ್ಧತಿಯಲ್ಲಿ ಶೇ.100ಕ್ಕೆ 100ರಷ್ಟು ಪರಿಹಾರ ಶತಸಿದ್ಧ.

ಇವರ ಬಳಿ ಅನೇಕ ಗಣ್ಯವ್ಯಕ್ತಿಗಳು, ರಾಜಕಾರಣಿಗಳು, ಸಿನಿಮಾ ನಟ, ನಟಿಯರು ಉತ್ತಮ ಪರಿಹಾರಗಳನ್ನು ಕಂಡುಕೊಂಡಿದ್ದಾರೆ.
ಖಾಯಂ ಮನೆವಿಳಾಸ: ಶ್ರೀಸಾಯಿಗಣಪತಿ ಜ್ಯೋತಿಷ್ಯಂ
ನಿರ್ಮಲ ಸ್ಟೋರ್ ಬಸ್‌ಸ್ಟಾಪ್ ಪಕ್ಕದಲ್ಲಿ 50 ಅಡಿರಸ್ತೆ, ಹನುಮಂತನಗರ, ಬೆಂಗಳೂರು
9611228895